# ಸತ್ಯವೇದದಲ್ಲಿನ ಕಾಲ ವೃತ್ತಾಂತ ಅಧ್ಯಯನ

## ಅಧ್ಯಯನ # 22



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

# ಅಧ್ಯಯನ # 22

## ಸತ್ಯವೇದದಲ್ಲಿನ ಕಾಲಗಣನೆಯ ಅಧ್ಯಯನ

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಇಂದು ನಾವು ಅಭ್ಯಾಸಿಸುವ ವಿಷಯ ಕಾಲಗಣನೆ

**ಕಾಲಗಣನೆ ಎಂದರೇನು?**

ಕಾಲಗಣನೆ (Chronology) ಪದದಲ್ಲಿ ಎರಡು ಭಾಗಗಳಿವೆ.

**ಕ್ರೊನೊಸ್** ಮತ್ತು **ಲೋಗೊಸ್**

**ಕ್ರೋನೊಸ್** ಎಂದರೆ **ಸಮಯ** ಅಥವಾ **ಕಾಲ**.

ಗಡಿಯಾರದ ತಾಂತ್ರಿಕ ಹೆಸರು "**ಕ್ರೋನೋಮೀಟರ್**" ಅಂದರೆ ಸಮಯವನ್ನು ಅಳತೆ ಮಾಡುವುದು.

**ಲೋಗೊಸ್** ಎಂದರೆ **ಅಭ್ಯಾಸ**.

**ಆದ್ದರಿಂದ ಕ್ರೊನಾಲಜಿ ಎಂದರೆ ಕಾಲಾಭ್ಯಾಸ**

ಸತ್ಯವೇದದಲ್ಲಿ ಕ್ರೊನಾಲಜಿ ಎಂದರೆ, "**ಸತ್ಯವೇದದಲ್ಲಿ ಮಾನವನ ಇತಿಹಾಸದ ಕಾಲದ ಲೆಕ್ಕಾಚಾರ**".




ನಮಗೆ ಸ್ಪಷ್ಟವಾಗಿ ತಿಳಿದಿರುವುದೇನೆಂದರೆ ಈಗ ನಾವು ಕ್ರಿ.ಶ. ಎಂಬ ಅವಧಿಯ ಲೆಕ್ಕಾಚಾರದಲ್ಲಿ 2000 ವರ್ಷಗಳಿಗಿಂತಲೂ ಹೆಚ್ಚಿನ ಕಾಲದಲ್ಲಿದ್ದೇವೆ.

**ಅದಾಮನ ಸೃಷ್ಠಿಯಿಂದ ಕ್ರಿ.ಪೂ. ವರೆಗೆ ಎಷ್ಟು ವರ್ಷಗಳಾಗಿವೆ?**

**ಇದುವರೆಗೂ ಭೂಮಿಯ ಮೇಲೆ ಮಾನವನ ಇತಿಹಾಸದ ವರ್ಷಗಳೆಷ್ಟು?**

ವಿಜ್ಞಾನಿಗಳು ಇದರ ಬಗ್ಗೆ ಅನೇಕ ವಿಧಗಳಲ್ಲಿ ಹೇಳುತ್ತಾರೆ. ಕೆಲವು ವಿಜ್ಞಾನಿಗಳು ಲಕ್ಷಾಂತರ ವರ್ಷಗಳೆಂದು, ಇನ್ನು ಕೆಲವು ವಿಜ್ಞಾನಿಗಳು ಸಾವಿರಾರು ವರ್ಷಗಳೆಂದು ಹೇಳುತ್ತಾರೆ.

**ಅದರೆ ನಿಗದಿತವಾದ ಲೆಕ್ಕಾಚಾರವೇನು?**

**ಸತ್ಯವೇದವು ಇದನ್ನು ಕುರಿತು ಪ್ರಕಟಿಸುತ್ತದೆಯೇ?**

ಹೌದು! ನಾವು ದೇವರ ಪುಸ್ತಕದಲ್ಲಿ ಸಂಶೋಧಿಸಿ ನೋಡಿದಾಗ ದೈವೀಕ ನಿಯಮವಾದ "**ಇಲ್ಲಿ ಸ್ವಲ್ಪವೂ**" "**ಅಲ್ಲಿ ಸ್ವಲ್ಪವೂ**" ಎಂಬುವ ಪ್ರಕಾರ ಇದಕ್ಕೆ ಉತ್ತರ 7 ಹಂತಗಳಲ್ಲಿ ಮತ್ತು 50

ವಾಕ್ಯಗಳಲ್ಲಿ ನಮಗೆ ಸಿಗುತ್ತದೆ.

ಈಗ ನಾವು ಸತ್ಯವೇದದ ಕಾಲಗಣನೆಯ ಅಧ್ಯಯನವನ್ನು ಆರಂಭಿಸೋಣ.

# ಹಂತ – 1

## (ಅದಾಮನ ಸೃಷ್ಟಿಯಿಂದ ಜಲಪ್ರಳಯದವರೆಗೆ)



ದೇವರ ದೈವೀಕ ಯೋಜನೆಯಲ್ಲಿ ಇದು ಮೊದಲನೇ ಲೋಕದ ಅವಧಿ. ಆದಿಕಾಂಡ ಐದನೇ ಅಧ್ಯಾಯದಲ್ಲಿ ಇದರ ಕಾಲವನ್ನು ದೇವರು ನಮಗೆ ಒದಗಿಸಿದ್ದಾರೆ. ಅನೇಕರು ಆದಿಕಾಂಡ ಐದನೇ ಅಧ್ಯಾಯದಲ್ಲಿ ವಂಶಾವಳಿಯ ವಿವರಣೆಯನ್ನು ಕುರಿತು ಆಶ್ಚರ್ಯಪಡುತ್ತಾರೆ.

ಮತ್ತು ಕೆಲವರು ಈ ಅಧ್ಯಾಯದ ಅವಶ್ಯಕತೆಯೇ ಇರಲಿಲ್ಲ ಎಂದು ನೆನೆಸುತ್ತಾರೆ.

ಈ ಐದನೇ ಅಧ್ಯಾಯ ಇಲ್ಲದೇ ಹೋಗಿದ್ದರೆ ಮೊದಲನೆ ಲೋಕದ "ಕಾಲದ ಲೆಕ್ಕಾಚಾರದ" ವಿವರಣೆ ನಮಗೆ ತಿಳಿಯುತ್ತಿರಲಿಲ್ಲ.

ಆದಾಮನ ಸೃಷ್ಟಿಯಿಂದ ಜಲಪ್ರಳಯದವರೆಗೂ ಎಷ್ಟು ವರ್ಷಗಳಾದವು ಎಂಬುದರ ಕಾಲದ ಲೆಕ್ಕಾಚಾರವು ನಮಗೆ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ.

**ಈ ಲೆಕ್ಕಾಚಾರವನ್ನು ಹೇಗೆ ಮುಂದುವರಿಸುವುದು?**

## ಸೇತನಿಂದ ಆರಂಭಿಸಿ ಆದಾಮನ ಸಂತತಿಯ 10 ಜನರ ವಯಸ್ಸನ್ನು ತೆಗೆದು ಕೊಳ್ಳೋಣವೇ?

ನಾವು ಹೀಗೆ ಮಾಡಿದರೆ ನಮಗೆ ಒಂದು ದೊಡ್ಡ ಸಂಖ್ಯೆ ಸಿಗುತ್ತದೆ ,ಇದಲ್ಲದೆ ಒಂದೇ ಅವಧಿಯಲ್ಲಿ ವಾಸಿಸುವ ವ್ಯಕ್ತಿಗಳ ಜೀವಿತಾವಧಿಗಳು ಅತಿಕ್ರಮಿಸುವ(**overlap**) ಕಾರಣ ನಾವು ಅದೇ ಅವಧಿಗಳನ್ನು ಎರಡು ಬಾರಿ,ಮೂರು ಬಾರಿ ಮತ್ತು ಅನೇಕ ಬಾರಿ ಲೆಕ್ಕ ಮಾಡಿದಂತಾಗುತ್ತದೆ.

**ಕೆಳಗಿನ ಚಾರ್ಟ್ ಅನ್ನು ಗಮನಿಸಿ**

| | | |
|---|---|---|
| | ಆದಾಮನು | 930 |
| 130 | ಸೇತನು | 912 |
| 105 | ಎನೋಷನು | 905 |
| 90 | ಕೇನಾನನು | 910 |
| 70 | ಮಹಲಲೇಲನು | 895 |
| 65 | ಯೆರೆದನು | 962 |
| 162 | ಹನೋಕನು | 365 |
| 65 | ಮೆತೂಷೆಲಹನು | 969 |
| 187 | ಲೆಮೆಕನು | 777 |
| 182 | ನೋಹನು | 600 |

ಆದಾಮನು ಲೆಮೆಕನಿಗೆ 56ವರ್ಷ ವಯಸ್ಸಾದಾಗ ಮರಣ ಹೊಂದಿದನು ಅಥವಾ ಅಲ್ಲಿಯವರೆಗೆ ಜೀವಿಸಿದನು.

ಜಲ ಪ್ರಳಯ

**ಉದಾಹರಣೆಗೆ:–** ಆದಾಮನ **325**ನೇ ವಯಸ್ಸಿನಲ್ಲಿ ಅವನ ಮರಿ ಮೊಮ್ಮಗನಾದ ಕೇನಾನನು ಹುಟ್ಟಿದನು.

ಈ **325** ವರ್ಷಗಳಲ್ಲಿ ಅವನು ಅವನ ಮಗನಾದ ಸೇತನೊಂದಿಗೆ **195** ವರ್ಷಗಳು ಹಾಗೂ ಆತನ ಮೊಮ್ಮಗನಾದ ಎನೋಷನೊಂದಿಗೆ **90** ವರ್ಷಗಳು ಜೀವಿಸಿದ್ದನು

ಈ ಮೂರು ಜನರ ಜೀವಿತವು ಒಂದು ನಿರ್ದಿಷ್ಟ ಕಾಲಾವಧಿಗಳಲ್ಲಿ ಪರಸ್ಪರ ಅತಿಕ್ರಮಿಸುತ್ತದೆ(**overlaps**).

ಈ 325 ವರ್ಷಕ್ಕೆ, ಈ ಮೂರ ಜನರ ವಯಸ್ಸನ್ನು ಕೂಡಿದಾಗ

ನಮಗೆ ಸಿಗುವುದೇನೆಂದರೆ– **325(ಅದಾಮ)** + **195(ಸೇತ)** + **90(ಎನೋಷ್)**

ಒಟ್ಟು **610** ವರ್ಷಗಳು!

**ಆದರೆ ಚಾಲನೆಯಲ್ಲಿದ್ದ ಸಮಯದ ನಿಜವಾದ ಅವಧಿ ಕೇವಲ 325 ವರ್ಷಗಳು!**

ಇದೇ ರೀತಿ ಹತ್ತು ತಲೆಮಾರಿನ ಎಲ್ಲಾ ಹತ್ತು ಜನರ ವಯಸ್ಸನ್ನು ಕೂಡಿದಾಗ ಹೀಗೆ ಆಗುತ್ತದೆ!

**ಹಾಗಾದರೆ ಏನು ಮಾಡೋಣ?**

ಪ್ರತಿಯೊಬ್ಬರ ವಯಸ್ಸು ಅಥವಾ ವರುಷಗಳನ್ನು ಅವರವರ ಚೊಚ್ಚಲು ಮಗು ಹುಟ್ಟುವ ವರೆಗೆ ಮಾತ್ರ ಕೂಡಿಸಬೇಕು!

ಹೀಗೆ ನೋಹನ ಜನನದವರೆಗೂ ಒಂಬತ್ತು ತಲೆಮಾರಿನ ಕೊಂಡಿಗಳ ಸರಪಣಿ ಸಿಗುತ್ತದೆ.

**ಈ ಮೇಲಿನ ವರುಷಗಳನ್ನು ಮತ್ತು ಜಲಪ್ರಳಯ ಆರಂಭವಾದಾಗ ನೋಹನಿಗಾಗಿದ್ದ ವಯಸ್ಸನ್ನು ಕೂಡಿಸಿದಾಗ, ಆದಾಮನ ಸೃಷ್ಟಿಯಿಂದ ಜಲಪ್ರಳಯದ ಮೊದಲ ದಿನದವರೆಗಿನ ವರುಷಗಳು ಸಿಗುತ್ತದೆ!**

ಹೌದು ಇದು ಬಹಳ ಸುಲಭವಾಗಿದೆ!

ಆದ್ದರಿಂದ ಲೆಕ್ಕಾಚಾರವು ಹೀಗಿದೆ–

| ಸತ್ಯವೇದದವಾಕ್ಯ | ವಯಸ್ಸು | ಜೇಷ್ಠ ಪುತ್ರ |
|---|---|---|
| ಆದಿಕಾಂಡ 5:3 - (ಆದಾಮನು) | 130 | ಶೇತನು |
| ಆದಿಕಾಂಡ 5:6 - (ಶೇತನು) | 105 | ಎನೋಷನು |
| ಆದಿಕಾಂಡ 5:9 - (ಎನೋಷನು) | 90 | ಕೇನಾನನು |
| ಆದಿಕಾಂಡ 5:12 - (ಕೇನಾನನು) | 70 | ಮಹಲಲೇಲನು |
| ಆದಿಕಾಂಡ 5:15 - (ಮಹಲಲೇಲನು) | 65 | ಯೆರೆದನು |
| ಆದಿಕಾಂಡ 5:18 - (ಯೆರೆದನು) | 162 | ಹನೋಕನು |
| ಆದಿಕಾಂಡ 5:21 - (ಹನೋಕನು) | 65 | ಮೆತೂಷೆಲಹನು |
| ಆದಿಕಾಂಡ 5:25 - (ಮೆತೂಷೆಲಹನು) | 187 | ಲೆಮೆಕನು |
| ಆದಿಕಾಂಡ 5:28 - (ಲೆಮೆಕನು) | 182 | ನೋಹನು |
| ಆದಿಕಾಂಡ 7:11 - (ನೋಹನು) | 600+ | ಜಲಪ್ರಳಯವಾದಾಗಿನ ವಯಸ್ಸು |
| ಒಟ್ಟು | 1656 | |

**ಮೊದಲನೇ ಲೋಕದ ಅವಧಿಯು 1656 ವರ್ಷಗಳು.**

# ಹಂತ – 2

## (ಜಲಪ್ರಳಯದಿಂದ ವಾಗ್ದಾನದವರೆಗೆ)



ಈ ಅವಧಿಯು ಜಲಪ್ರಳಯ ಆರಂಭವಾದ ದಿನದಿಂದ ಆರಂಭವಾಗಿ "**ವಾಗ್ದಾನ**"ದವರೆಗೆ ಹೋಗುತ್ತದೆ.

**ಇಲ್ಲಿ ಯಾವ "ವಾಗ್ದಾನ" ವನ್ನು ಸೂಚಿಸಲಾಗಿದೆ?**

ಈ ವಾಗ್ದಾನವು "**ಅಬ್ರಹಾಮನ ವಾಗ್ದಾನ**" ಎಂದು ಕರೆಯಲ್ಪಡುವ, ಮೋರಿಯಾ ಬೆಟ್ಟದಲ್ಲಿ ಅಬ್ರಹಾಮನು ಇಸಾಕನನ್ನು ಬಲಿ ಕೊಡಲಿಕ್ಕಿರುವ ಸಮಯದಲ್ಲಿ ದೇವರು ಕೊಟ್ಟ ವಾಗ್ದಾನವನ್ನು ಸೂಚಿಸುತ್ತದೆಯೇ?


**ಇದಕ್ಕೆ ಉತ್ತರ ಇಲ್ಲ!**

ಇಲ್ಲಿ ನಿಜವಾದ ವಾಗ್ದಾನವು ದೇವರು '**ಅಬ್ರಹಾಮು**'ನಿಗೆ ಕಲ್ದೀಯರ ದೇಶದ (Ur)ಊರ್ ನಗರದಲ್ಲಿರುವಾಗಲೇ ಕೊಟ್ಟಂತ ವಾಗ್ದಾನವಾಗಿದೆ.

ಈ ವಾಕ್ಯವನ್ನು ಕೆಳಕಂಡಂತೆ ನೋಡುತ್ತೇವೆ.

## ಆದಿಕಾಂಡ 12:1-3

**"ಯೆಹೋವನು ಅಬ್ರಾಮನಿಗೆ–ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಅಶೀರ್ವಾದನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು. ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಅಶೀರ್ವಾದವುಂಟಾಗುವುದು ಎಂದು ಹೇಳಿದನು."**


**ಹೌದು! ಇದೇ ಆ ವಾಗ್ದಾನವು!**

ಅಬ್ರಹಾಮನು ಅತನ ಸ್ವದೇಶವನ್ನು ಅತನ ತಂದೆಯ ಮನೆಯನ್ನು ಆತನ ಬಂಧು ಬಳಗವನ್ನು ಬಿಟ್ಟು ಹೊರಟರೆ ಅವನಿಗೆ ವಾಗ್ದಾನದ ಆಶೀರ್ವಾದ ದೊರಕುವುದು ಎಂಬುದೇ ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನವಾಗಿತ್ತು.

ಅಬ್ರಹಾಮನು "ದೇವರು ಹೇಳಿದಂತೆ" ಆ ದೇಶವನ್ನು ಬಿಟ್ಟು ಹೊರಟನು. ಅದೇ ಆತನಿಗೆ ವಾಗ್ದಾನ ಮಾಡಿದ ದಿನಾಂಕ. ಇದರ ವಿವರಣೆಯನ್ನು ನಾವು ಹೀಗೆ ನೋಡುತ್ತೇವೆ

## ಆದಿಕಾಂಡ 12:4

**"ಯೆಹೋವನು ಹೇಳಿದ ಮೇರೆಗೆ ಅಬ್ರಾಮನು ಹೊರಟು ಹೋದನು ಲೋಟನೂ ಸಂಗಡ ಹೋದನು. ಅಬ್ರಾಮನು ಖಾರಾನ್ ಪಟ್ಟಣವನ್ನು ಬಿಟ್ಟು ಹೊರಟಾಗ ಎಪ್ಪತ್ತೈದು ವರುಷದವನಾಗಿದ್ದನು."**

**ಆಗ ಆತನಿಗೆ 75 ವರುಷ ವಯಸ್ಸಾಗಿತ್ತು.**

ಇದು ಸಂಭವಿಸಿದ್ದು ಅವನ ತಂದೆ ತೆರಹ ನಿಧನರಾದ ನಂತರ. ಇದನ್ನು ಬೇರೆಡೆ ಓದುತ್ತೇವೆ–


## ಅಪೊಸ್ತಲ 7:4

**"ಆಗ ಆತನು ಕಸ್ದೀಯರ ದೇಶದಿಂದ ದೊರಟು ಹೋಗಿ ಖಾರಾನಿನಲ್ಲಿ ವಾಸವಾಗಿದ್ದನು. ಅವನ ತಂದೆ ಸತ್ತಮೇಲೆ ದೇವರು ಅವನನ್ನು ಅಲ್ಲಿಂದ ನೀವು ಈಗ ವಾಸವಾಗಿರುವ ಈ ದೇಶಕ್ಕೆ ಬರಮಾಡಿದನು."**

ತೆರಹನ ಸಾವಿನವರೆಗೆ ಅಂದರೆ ಅಬ್ರಹಾಮನು ತನ್ನ ಸ್ವದೇಶವನ್ನು ಮತ್ತು ಜನರನ್ನು ಬಿಟ್ಟು ಅತನು ವಾಗ್ದಾನವನ್ನು ಹೊಂದಿದ ಸಮಯದವರೆಗೆ, ಈ ಹಂತವನ್ನು ಲೆಕ್ಕಿಸುತ್ತೇವೆ.

ಆದ್ದರಿಂದ, ಈ ಹಂತದಲ್ಲಿರುವ ಸತ್ಯವೇದ ಲೆಕ್ಕಾಚಾರವನ್ನು ಆದಿಕಾಂಡ 11ನೇ ಅಧ್ಯಾಯದಲ್ಲಿ ನಾವು  ಈ ರೀತಿ ನೋಡಬಹುದು.

| ಸತ್ಯವೇದದವಾಕ್ಯ | ವಯಸ್ಸು | ಜೇಷ್ಠ ಪುತ್ರ |
|---|---|---|
| ಆದಿಕಾಂಡ 11:10 - (ಜಲ ಪ್ರಳಯದ ನಂತರ ) | 2 | ಅರ್ಪಕ್ಷದನು |
| ಆದಿಕಾಂಡ 11:12 - (ಅರ್ಪಕ್ಷದನು) | 35 | ಶೆಲಹನು |
| ಆದಿಕಾಂಡ 11:14 - (ಶೆಲಹನು) | 30 | ಎಬರನು |
| ಆದಿಕಾಂಡ 11:16 - (ಎಬರನು) | 34 | ಪೆಲೆಗನು |
| ಆದಿಕಾಂಡ 11:18 - (ಪೆಲೆಗನು) | 30 | ರೆಗೂವನು |
| ಆದಿಕಾಂಡ 11:20 - (ರೆಗೂವನು) | 32 | ಸೆರೂಗನು |
| ಆದಿಕಾಂಡ 11:22 - (ಸೆರೂಗನು) | 30 | ನಾಹೋರನು |
| ಆದಿಕಾಂಡ 11:24 - (ನಾಹೋರನು) | 29 | ತೆರಹನು |
| ಆದಿಕಾಂಡ 11:32 - (ತೆರಹನು) | 205+ | (ಪ್ರತ್ಯಾಗ ಆದ ವಯಸ್ಸು) |
| ಒಟ್ಟು | 427 | |



# ಹಂತ – 3

## (ವಾಗ್ದಾನದಿಂದ ಆಜ್ಞೆ ಕೊಡುವವರೆಗೆ)



ಈ ಕಾಲಾವಧಿ (3ನೇ ಹಂತವು), 2ನೇ ಹಂತ ಮುಗಿದ ಕೂಡಲೇ ಆರಂಭವಾಗುತ್ತದೆ. ಅಬ್ರಹಾಮನು ತನ್ನ ತಂದೆಯು ಮರಣದ ನಂತರ ತನ್ನ ಸ್ವ ದೇಶವನ್ನು ಬಿಟ್ಟು ಹೊರಟ ದಿನದಿಂದ ಆಜ್ಞೆಕೊಡುವವರೆಗೆ ಹೋಗುತ್ತದೆ.

**ಇಲ್ಲಿ ಗಮನಿಸಬೇಕಾಗಿರುವುದೇನೆಂದರೆ ಎರಡು ಹಂತಗಳ (stage) ನಡುವೆ ಯಾವುದೇ ಸಮಯದ ಅಂತರ ಇರುವುದಿಲ್ಲ.**

**ಈ ಆಜ್ಞೆ ಯಾವಾಗ ಕೊಡಲ್ಪಟ್ಟಿತು?**

ಸೀನಾಯಿ ಬೆಟ್ಟದಲ್ಲಿ ಮೋಶೆಯು 10 ಆಜ್ಞೆಯನ್ನು ಪಡೆದುಕೊಂಡ ಸಂದರ್ಭದಲ್ಲಿ ಎಂದು ಅನೇಕರು ನೆನೆಸುತ್ತಾರೆ.

**ಆದರೆ ಅದು ಹಾಗಲ್ಲ**

ಈ ಆಜ್ಞೆಯು ಇಸ್ರಾಯೇಲ್ಯರು ಕೊನೆಯ ರಾತ್ರಿ ಐಗುಪ್ತದಿಂದ ಹೊರಡುವ ಮುಂಚೆ ಕೊಟ್ಟ ಮೊದಲ ಆಜ್ಞೆಯನ್ನು ಸೂಚಿಸುತ್ತದೆ. ಇದನ್ನು ಕುರಿತು ಈ ಕೆಳಗಿನ ವಾಕ್ಯದಲ್ಲಿ ನೋಡೋಣ.

## ವಿಮೋಚನಕಾಂಡ 12:41-43

**"ನಾನೂರ ಮೂವತ್ತು ವರುಷಗಳು ಕಳೆದನಂತರ ಅದೇ ದಿವಸದಲ್ಲಿ ಯೆಹೋವನ ಸೈನ್ಯಗಳೆಲ್ಲಾ ಐಗುಪ್ತ ದೇಶವನ್ನು ಬಿಟ್ಟು ಹೊರಟು ಹೋದವು. ಯೆಹೋವನು ಆ ರಾತ್ರಿಯಲ್ಲಿಯೇ ಅವರನ್ನು ಐಗುಪ್ತದೇಶದಿಂದ ಹೊರಗೆ ಬರಮಾಡಿದ್ದರಿಂದ ಅವರು ಈ ರಾತ್ರಿಯಲ್ಲಿ ಆತನ ಘನಕ್ಕಾಗಿ ಜಾಗರಣೆಯನ್ನು ಮಾಡಬೇಕು. ಇಸ್ರಾಯೇಲ್ಯರೆಲ್ಲರೂ ತಲತಲಾಂತರಕ್ಕೂ ಯೆಹೋವನಿಗೆ ಈ ಜಾಗರಣೆಯನ್ನು ಮಾಡಬೇಕು. ಯೆಹೋವನು ಮೋಶೆ ಆರೋನರಿಗೆ ಹೇಳಿದ್ದೇನಂದರೆ – ಪಸ್ಕವನ್ನು ಆಚರಿಸಬೇಕಾದ ಕ್ರಮ ಹೇಗಂದರೆ – ಅನ್ಯನೊಬ್ಬನೂ ಅದರಲ್ಲಿ ಭೋಜನ ಮಾಡಬಾರದು."**

**ನೀವು ನೋಡಿದಿರಾ!**

ಇದನ್ನು **"ಪಸ್ಕವನ್ನು ಆಚರಿಸುವ ಕ್ರಮ"** ಎಂದು ಕರೆಯುತ್ತಾರೆ.

ಹೌದು! ಇದುವೇ ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಮೊದಲ ಆಜ್ಞೆ!

**ಇದರ ಕಾಲಾವಧಿಯು ಎಷ್ಟು ?**

ಇದರ ಉತ್ತರವನ್ನು ನಾವು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ.

## ಗಲಾತ್ಯದವರಿಗೆ 3:17

**"…..ದೇವರು ಮೊದಲು ಸ್ಥಿರಪಡಿಸಿದ ಒಡಂಬಡಿಕೆಯನ್ನು ನಾನೂರ ಮೂವತ್ತು ವರುಷಗಳ ಮೇಲೆ ಬಂದ ಧರ್ಮಶಾಸ್ತ್ರವು ರದ್ದುಮಾಡಿ ಆ ವಾಗ್ದಾನವನ್ನು ವ್ಯರ್ಥಮಾಡುವದಿಲ್ಲ".**

ಇದು ವಾಗ್ದಾನ ಮತ್ತು ಆಜ್ಞೆಗಳ ನಡುವಿನ ಕಾಲಾವಧಿ **430** ವರುಷಗಳು ಎಂದು ಸ್ಪಷ್ಟವಾಗಿ ಹೇಳುತ್ತದೆ.

ಆದರೆ ಇದೇ ಲೆಕ್ಕವನ್ನು ನಾವು ಇನ್ನೊಂದು ರೀತಿಯಲ್ಲಿ ನೋಡಬಹುದು.

## ವಿಮೋಚನಕಾಂಡ 12:40

**"ಇಸ್ರಾಯೇಲ್ಯರು ಐಗುಪ್ತದೇಶದಲ್ಲಿ ವಾಸವಾಗಿದ್ದದ್ದು 430 ವರುಷ".**

**ಇದು ಹೇಗೆ ಸಾಧ್ಯ?**

0ಯಾಕೋಬನು ಐಗುಪ್ತಕ್ಕೆ ಬಂದಾಗ ಒಟ್ಟು ಎಪ್ಪತ್ತು ಮಂದಿ ಜನರಿದ್ದರು **(ಆದಿಕಾಂಡ 46:2)** ಅದೂ ಮೂರು ತಲೆಮಾರಿನಲ್ಲಿ –

**(ಲೇವಿ – ಕೆಹಾತ್ – ಅಮ್ರಾಮ್– ಮೋಶೆ – 1 ಪೂರ್ವಕಾಲ 6:1-3)**

## ಈ ಕಾಲಾವಧಿ0ಯು 430 ವರ್ಷವಾಗಲು ಹೇಗೆ ಸಾಧ್ಯ?

ಈ ವಾಕ್ಯವನ್ನು ಅರ್ಥಮಾಡಿಕೊಳ್ಳಲು, ನಾವು ಎಚ್ಚರಿಕೆಯಿಂದ ಗಮನಿಸಬೇಕಾದ ಅಂಶವೇನೆಂದರೆ **430** ವರುಷಗಳು ಎಂಬುದು ಅವರು ಐಗುಪ್ತದಲ್ಲಿದ್ದ ಕಾಲಾವಧಿಯಲ್ಲ ಆದರೆ ಇದೂ ಕೂಡ ಅದರಲ್ಲಿ ಸೇರಿತ್ತು.


"ಇಸ್ರಾಯೇಲ್ ಮಕ್ಕಳು ಐಗುಪ್ತದಲ್ಲಿ ಪ್ರವಾಸವಾಗಿ ವಾಸಮಾಡಿದ್ದ ಕಾಲವು ನಾನೂರ ಮೂವತ್ತು ವರುಷಗಳಾಗಿದ್ದವು." **(ಪವಿತ್ರ ಬೈಬಲ್)**

ಅಬ್ರಹಾಮನು, ಇಸಾಕನು, ಯಾಕೋಬನು ಮತ್ತು ಆತನ ಮಕ್ಕಳೂ ಕಾನಾನ್ ದೇಶದ ಒಳಗೆಯೇ ವಾಸವಾಗಿದ್ದು, ಅದರ ಒಳಗೆಯೇ ಆದರೂ ಸಹ, ಅಲೆಮಾರಿಗಳಂತೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣ ಮಾಡಿದರು.

**ಆದಕಾರಣ 430 ವರುಷಗಳು ಅಬ್ರಹಾಮನು ಕಾನಾನ್ ದೇಶಕ್ಕೆ ಬಂದ ವರುಷದಿಂದ ಆರಂಭಗೊಳ್ಳುತ್ತದೆ.**

ಇದರೊಂದಿಗೆ, ಹೇಗೆ ಲೇವಿಯು ತತ್ವರೂಪವಾಗಿ ಅಬ್ರಹಾಮನೊಳಗೆ ಇರುವಾಗಲೇ ದಶಮಭಾಗವನ್ನು ಕೊಟ್ಟನೋ, ಹಾಗೆಯೇ ಇಸ್ರಾಯೇಲನ ಮಕ್ಕಳು ವಾಗ್ದಾನ ಮಾಡಲ್ಪಟ್ಟ ದೇಶದವನ್ನು ಸ್ವಾಧೀನಮಾಡಿಕೊಳ್ಳುವದಕ್ಕೆ ಮೊದಲೇ ಅಬ್ರಹಾಮ, ಇಸಾಕ, ಯಾಕೋಬನ ಒಳಗೆ ಇರುವಾಗಲೇ **430** ವರುಷಗಳು ಅದರಲ್ಲಿ ಸಂಚರಿಸಿದರು. (ಇಬ್ರಿಯ 7:9,10)

ಇನ್ನೂ ಹುಟ್ಟದಿರುವಾಗಲೇ, ಅಬ್ರಹನೊಳಗೆ ತತ್ವರೂಪವಾಗಿ ಇರುವಾಗಲೇ, ಒಂದು ಜನಾಂಗವಾಗಿ ಇಸ್ರಾಯೇಲರಿಗೆ ತಮ್ಮ ಸ್ವಂತ ಭೂಮಿಯ ವಾಗ್ದಾನ ನೀಡಲಾಗಿತ್ತು, ಆದುದರಿಂದ ಅವರು ಆ ವಾಗ್ದಾನದ ನೆರವೇರಿಕೆಗಾಗಿ ಕಾಯುತ್ತಾ ಪ್ರವಾಸಿಗಳಂತೆ ಅಲೆದಾಡಿದರು.




ಪಸ್ಕದ ಆಜ್ಞಾವಿಧಿಯನ್ನು ಕೊಡುವುದರೊಂದಿಗೆ ಈ 430 ವರ್ಷಗಳು ಮುಕ್ತಾಯವಾಗುತ್ತದೆ.



**ಹೀಗೆ ವಾಗ್ದಾನ ಮಾಡಿದಂದಿನಿಂದ ಆಜ್ಞಾವಿಧಿಯನ್ನು ಕೊಡುವವರೆಗಿನ ಕಾಲಾವಧಿ 430 ವರ್ಷಗಳು.**

## ಹಂತ – 4

## (ಆಜ್ಞಾವಿಧಿಯನ್ನು ಕೊಟ್ಟಂದಿನಿಂದ ದೇಶವನ್ನು ಹಂಚಿಕೊಡುವವರೆಗೆ)


4ನೇ ಹಂತದ ಕಾಲಾವಧಿಯು 3ನೇ ಹಂತವು ಮುಗಿದ ತಕ್ಷಣವೇ ಆರಂಭವಾಗುತ್ತದೆ!

**ಎಂತಹ ನಿಖರವಾದ ದೇವರು!**

ಈ ಹಂತವು, ಐಗುಪ್ತದಲ್ಲಿ ಪಸ್ಕದ ಆಜ್ಞಾವಿಧಿ ಆಚರಿಸಲ್ಪಟ್ಟ ಕೊನೆ0ಯರಾತ್ರಿ0ಯಲ್ಲಿ, ಆರಂಭಗೊಂಡು ಕಾನಾನಿನಲ್ಲಿ 11ಕುಲಗಳಿಗೆ ಭೂಮಿ0ಯನ್ನು ಹಂಚಿಕೊಡುವವರೆಗೆ ನಡೆ0ಯುತ್ತದೆ,

ಲೇವಿಕುಲದವರಿಗೆ 0ಯಾವ ಭಾಗವನ್ನೂ ಹಂಚಿಕೊಡಲಿಲ್ಲ ಆದ್ದರಿಂದ ಅವರು ಇತರ 11 ಕುಲದವರಿಂದ 1/10 ಭಾಗ (ದಶಮಾಂಶವನ್ನು) ಪಡೆ0ಯುತ್ತಿದ್ದರು. (ಆರಣ್ಯಕಾಂಡ 18:26)

ಕೆಳಗೆ ಕೊಟ್ಟಿರುವಂತೆ ಇದನ್ನು ಲೆಕ್ಕಿಸಲು 3 ಹಂತಗಳಿವೆ



| ವಾಕ್ಯ | ವಿವರಣೆ | ಕಾಲಾವಧಿ |
|---|---|---|
| ಅರಣ್ಯಕಾಂಡ 33 : 3<br><br>ಅರಣ್ಯಕಾಂಡ 10 : 11-13 | “ಮೊದಲನೆಯ ತಿಂಗಳಿನ ಹದಿನೈದನೆಯ ದಿನದಲ್ಲಿ ಅಂದರೆ ಪಸ್ಕಹಬ್ಬ ಮರುದಿನದಲ್ಲಿ ಇಸ್ರಾಯೇಲ್ಯರು ಐಗುಪ್ತ್ಯರ ಎದುರಿನಲ್ಲೇ ಅಟ್ಟಹಾಸದಿಂದ ರಮ್ಸೇಸಿನಿಂದ ಹೊರಟರು”.<br>“ಎರಡನೆಯ ವರುಷದ ಎರಡನೆಯ ತಿಂಗಳಿನ ಇಪ್ಪತ್ತನೆಯ ದಿನದಲ್ಲಿ ದೇವದರ್ಶನದ ಗುಡಾರದ ಮೇಲಿದ್ದ ಮೇಘವು ಮೇಲಕ್ಕೆ ಎದ್ದದರಿಂದ ಇಸ್ರಾಯೇಲ್ಯರು ಸೀನಾಯಿ ಅರಣ್ಯವನ್ನು ಬಿಟ್ಟು ಮುಂದೆ ಮುಂದೆ ಪ್ರಯಾಣ ಮಾಡಿದರು. ತರುವಾಯ ಆ ಮೇಘವು ಪಾರಾನ್ ಅರಣ್ಯದಲ್ಲಿ ನಿಂತಿತು ಯೆಹೋವನು ಮೋಶೆಯ ಮೂಲಕ ಆಜ್ಞಾಪಿಸಿದ ರೀತಿಯಲ್ಲಿ ಅವರು ಪ್ರಯಾಣ ಮಾಡಿದ್ದು ಇದು ಮೊದಲನೆಯ ಸಾರಿ”.<br>ಈ ವಾಕ್ಯಗಳು ಐಗುಪ್ತದಿಂದ ಸೀನಾಯಿ ಬೆಟ್ಟದವರೆಗೆ ಮಾಡಿದ ಪ್ರ0ಯಾಣವನ್ನು ಸ್ಪಷ್ಟವಾಗಿ ತೋರಿಸುತ್ತದೆ. | 1<br>ವರುಷಗಳು<br><br>+ |
| ಅರಣ್ಯಕಾಂಡ 14 : 33 | “ನಿಮ್ಮೆಲ್ಲರ ಶವಗಳು ಈ ಅರಣ್ಯದಲ್ಲಿ ಬೀಳುವ ಪರ್ಯಂತರ ನೀವು ಮಾಡಿದ ದ್ರೋಹದ ಫಲವನ್ನು ನಿಮ್ಮ ಮಕ್ಕಳು ಅನುಭವಿಸುವವರಾಗಿ 40 ವರುಷ ಅರಣ್ಯವಾಸಿಗಳಾಗಿರಬೇಕು”.<br>ಈ ವಾಕ್ಯವು ಶಿಕ್ಷೆ0ಯನ್ನು ಹೊಂದಿದ 40 ವರುಷಗಳ ಕಾಲಾವಧಿ0ಯನ್ನು ಸೂಚಿಸುತ್ತದೆ 1 ವರ್ಷ ಮೊದಲೇ ಅರಣ್ಯದಲ್ಲಿ ವಾಸವಾಗಿದ್ದರಿಂದ ಈ ಕಾಲಾವಧಿ0ಯು........ | 39<br>ವರುಷಗಳು |
| ಯೊಹೋಶುವ 14 : 7,10 | “ಯೆಹೋವನ ಸೇವಕನಾದ ಮೋಶೆಯು ಈ ದೇಶವನ್ನು ಸಂಚರಿಸಿ ನೋಡುವುದಕೋಸ್ಕರ ಕಾದೇಶ್ | + |

ಬರ್ನೇಯದಿಂದ ನನ್ನನ್ನು
ಕಳುಹಿಸಿದಾಗ ನನಗೆ 40 ವರ್ಷವಾಗಿತ್ತು".


ಯೆಹೋವನು ಈ ಮಾತುಗಳನ್ನು ಮೋಶೆಗೆ ಹೇಳಿದಂದಿನಿಂದ ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆಯುತ್ತಿದ್ದ ವರ್ಷಗಳೂ ಸೇರಿ 45 ವರ್ಷಗಳು ದಾಟಿದವು. ಯೆಹೋವನು ತಾನು ನುಡಿದಂತೆಯೇ ಈ ಕಾಲವೆಲ್ಲಾ ನನ್ನನ್ನು ಜೀವದಿಂದುಳಿಸಿದ್ದಾನೆ. ಈಗ ನಾನು 85 ವರ್ಷದವನಾಗಿದ್ದೇನೆ.

ಕಾಲೇಬನು ಮತ್ತು 11 ಮಂದಿ ಇತರರು ಕಾನಾನ್ ದೇಶವನ್ನು ಗೂಢಾಚಾರಿಗಳಾಗಿ ನೋಡಲು ಮತ್ತು ವಿಚಾರ ಮಾಡಲುಹೋದಂದಿನಿಂದ ಭೂಮಿಯು ಹಂಚಿಕೆಮಾಡುವವರೆಗೆ ಇರುವ ವರ್ಷಗಳ ವ್ಯತ್ಯಾಸವನ್ನು ಕಾಲೇಬನು ಮಾತನಾಡುತ್ತಾನೆ. (ಅರಣ್ಯಕಾಂಡ 13:6)

**6**
**ವರುಷಗಳು**

ಇದರ ಕಾಲಾವಧಿಯು 45 ವರ್ಷಗಳು.
ಈ 45 ವರ್ಷಗಳು ಇಸ್ರಾಯೇಲ್ಯರು ಸೀನಾಯಿ ಬೆಟ್ಟದಲ್ಲಿ ಇರುವಾಗ ಅರಂಭವಾಗುತ್ತದೆ. ಆದ್ದರಿಂದ ಭೂಮಿಯು ಹಂಚಿಕೆಯು ಕಾಲಾವಧಿಯು 45-39 ಎಂದು ಲೆಕ್ಕಿಸಲಾಗಿದೆ.

**ಈ ಕಾಲಾವಧಿಯ ಒಟ್ಟು ವರ್ಷಗಳು** **46 ವರುಷಗಳು**



# ಹಂತ – 5

## (ನ್ಯಾಯಸ್ಥಾಪಕರ ಕಾಲಾವಧಿ)



ಈ ಕಾಲವು ಭೂಮಿಯ ಹಂಚಿಕೆಯ ಕಾರ್ಯ ಮುಗಿದಾಗಿನಿಂದ ಹಿಡಿದು ಇಸ್ರಾಯೇಲ್ಯರ ಮೊದಲ ರಾಜನಾಗಿ ಸೌಲನನ್ನು ಅಭಿಷೇಕಿಸುವವರೆಗೆ ನಡೆಯುತ್ತದೆ!

**ಈ ಕಾಲಾವಧಿಯಲ್ಲಿ ದೇವರು ಇಸ್ರಾಯೇಲ್ಯರಿಗೆ ನ್ಯಾಯಸ್ಥಾಪಕರನ್ನು ಕೊಟ್ಟರು!**

ಮೊದಲನೇ ನ್ಯಾಯಸ್ಥಾಪಕ ಯೆಹೋಶುವನು **(ಅರಣ್ಯಕಾಂಡ 27:22,23)**

ಈ ನ್ಯಾಯಸ್ಥಾಪಕರು ನಾಯಕರಾಗಿ ಇಸ್ರಾಯೇಲ್ಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಇವರಲ್ಲಿ ಕೊನೆಯ ನ್ಯಾಯಸ್ಥಾಪಕನು ಪ್ರವಾದಿಯಾದ ಸಮುವೇಲನು.

**ಈ ನ್ಯಾಯಸ್ಥಾಪಕರ ಕಾಲದ ವರ್ಷಗಳೆಷ್ಟು?**

ಇದರ ಬಗ್ಗೆ ಮಾಹಿತಿ ನಮಗೆ ಹಳೆಯ ಒಡಂಬಡಿಕೆಯಲ್ಲಿ ಸಿಗುವುದಿಲ್ಲ. ಆದರೆ ದೇವರು ತಾನೆ ಪರಿಶುದ್ಧಾತ್ಮನ ಮೂಲಕ ಹೊಸ ಒಡಂಬಡಿಕೆಯಲ್ಲಿ

ಅಪ್ರೋಸ್ತಲನಾದ ಪೌಲನ ಬಾಯಿಂದ ಒದಗಿಸುತ್ತಾರೆ.

**ಅಪೊಸ್ತಲ 13:20**

**"ಇಷ್ಟರೊಳಗೆ ಸುಮಾರು ನಾನೂರೈವತ್ತು ವರುಷಗಳು ಗತಿಸಿದವು ಇದಾದ ಮೇಲೆ ಪ್ರವಾದಿಯಾದ ಸಮುವೇಲನ ಕಾಲದವರೆಗೆ ನ್ಯಾಯಾಧಿಪತಿಗಳನ್ನು ಕೊಟ್ಟನು"**

ಈ ಮೇಲಿನ ವಾಕ್ಯವನ್ನು ಗಮನಿಸಿದಿರಾ – **"ಇದಾದ ಮೇಲೆ"**

**ಇದು ಏನನ್ನು ಸೂಚಿಸುತ್ತದೆ?**

ಈ ಲೆಕ್ಕಾಚಾರದ ಕಾಲಾವಧಿ0ಯು ಆರಂಭವಾಗುವುದು, **"ದೇಶವನ್ನು ಹಂಚಿಕೊಟ್ಟ"** ನಂತರವೇ ಎಂದು ಈ ಮೇಲಿನ ವಾಕ್ಯವು ದೃಢ ಪಡಿಸುತ್ತದೆ.

**ಅಪೋಸ್ತಲ 13:18,19**

**"ಆತನು ಸುಮಾರು 40 ವರುಷಗಳವರೆಗೂ ಅಡವಿಯಲ್ಲಿ ಅವರ ನಡಾವಳಿಯನ್ನು ಸಹಿಸಿಕೊಂಡು ಕಾನಾನ್ ದೇಶದಲ್ಲಿದ್ದ ಅನ್ಯಜನಗಳ ಏಳು ರಾಜ್ಯಗಳನ್ನು ನಿರ್ಮೂಲಮಾಡಿ ಆ ಜನರ ದೇಶವನ್ನು ಅವರಿಗೆ ಬಾಧ್ಯವಾಗಿ ಹಂಚಿಕೊಟ್ಟನು".**

**ಅದು ಇಲ್ಲದೆ!! ಅದು ಬಹಳ ಸ್ಪಷ್ಟವಾಗಿದೆ!**

ಈ ನ್ಯಾ0ಯಸ್ಥಾಪಕರ ಕಾಲಾವಧಿ0ಯು ಎಷ್ಟು ವರುಷಗಳೆಂದು ತೋರಿಸಲಾಗಿದೆ? ಹೌದು ಈ ಕಾಲಾವಧಿ0ಯು – 450 ವರುಷಗಳು ಎಂದು ತೋರಿಸಲಾಗಿದೆ.

ಈ ವಚನದಲ್ಲಿ ...."**ಸುಮಾರು**"...


ಎಂಬ ಪದವು ಇದು ನ್ಯಾಯಾಧಿಪತಿಗಳ ನಿಖರವಾದ ಕಾಲಾವಧಿಯಲ್ಲ ಬದಲಿಗೆ ಅಂದಾಜು ಲೆಕ್ಕಾಚಾರ ಎಂಬ ಕಲ್ಪನೆಯನ್ನು ನೀಡುತ್ತದೆ.

**ಇದು ಏಕೆ ?**

ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ದೇವರು ಪೂರೈಸಿದ **450** ವರ್ಷಗಳ ಈ ಅವಧಿ ನಿಜವಾಗಿಯೂ ನಿಖರವಾದದ್ದಲ್ಲ ಎಂದು ತಿಳಿದುಬರುತ್ತದೆ.

**ಏಕೆ? ಒಬ್ಬರು ಇದನ್ನು ಹೇಗೆ ಹೇಳಬಹುದು?**

ಯಾಕಂದರೆ ಈ ನ್ಯಾಯಾಧಿಪತಿಗಳ ಅವಧಿಯ ಎರಡು ಕಡೆಗಳಲ್ಲೂ...ಆರಂಭ ಹಾಗೂ ಅಂತ್ಯದಲ್ಲಿ ಸತ್ಯವೇದದ ಕಾಲಗಣನೆಯ ಹಿಂದಿನ ಹಾಗೂ ಮುಂದಿನ ಹಂತಗಳೊಡನೆ ಅತಿಕ್ರಮ ಹೊಂದುತ್ತದೆ(**gets overlapped**).




ಮೊದಲನೇ ನ್ಯಾಯಾಧಿಪತಿಯಾದ ಯೆಹೋಶುವನನ್ನು ಮೋಶೆಯು ನ್ಯಾಯಾಧಿಪತಿಯಾಗಿ ಕಾನಾನನ್ನು ಪ್ರವೇಶಿಸುವ ಮೊದಲೇ ಅಭಿಷೇಕಿಸಿದನು. ದೇಶವನ್ನು ಹಂಚಿ ಕೊಡುವ ಸಂದರ್ಭದಲ್ಲಿ ನ್ಯಾಯಾಧಿಪತಿಯಾಗಿದ್ದನು.

ಮತ್ತು ಈ ಕಾರ್ಯದ ಅನಂತರದಲ್ಲಿ ಕಾಲೇಬನು ಆಡಿದ ಮಾತುಗಳು ಯೆಹೋಶುವ 14:10 ರಲ್ಲಿ ಕಂಡು ಬರುತ್ತದೆ.

ಅದಲ್ಲದೇ ಕಡೇ ನ್ಯಾಯಾಧಿಪತಿಯಾದ ಸಮುವೇಲನು ಅವನ ಮರಣದ ವರೆಗೂ ತನ್ನ ಕೆಲಸವನ್ನು ಮುಂದುವರಿಸಿದನು,

........ ಸೌಲನು ಇಸ್ರಾಯೇಲಿನ ಅರಸನಾಗಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದ ನಂತರವೂ ಸೌಲನು ತನ್ನ ಕೆಲಸವನ್ನು ಮುಂದುವರಿಸಿದನು.

ಆದಕಾರಣ ನ್ಯಾಯಾಧಿಪತಿಗಳ ಕಾಲಾವಧಿ ಕೆಳಕಂಡಂತಿದೆ–




**ಈ ಚುಕ್ಕೆ ಇಟ್ಟ ಸಾಲು ನ್ಯಾಯಸ್ಥಾಪಕರ ಪೂರ್ಣ ಕಾಲಾವಧಿಯನ್ನು ಸೂಚಿಸುತ್ತದೆ.**

ಹೀಗೆ ದೇವರು **“ಇದಾದ ಮೇಲೆ”** ಎಂಬ ಕಾಲಾವಧಿಯನ್ನು ಕೊಡುತ್ತಾರೆ (**ಅಪೊಸ್ತಲ 13:20**) ಅಂದರೆ ಭೂಮಿಯ ಹಂಚಿಕೆಯ ನಂತರದಿಂದ ಸೌಲನ ಆಳ್ವಿಕೆ ಪ್ರಾರಂಭವಾಗುವುದಕ್ಕೆ ಮೊದಲು ಅಥವಾ ಸೌಲನನ್ನು ರಾಜನಾಗಿ ಅಭಿಷೇಕಿಸಿದ ದಿನದವರೆಗೆ ಸಮುವೇಲನು ನ್ಯಾಯಾಧಿಪತಿಯಾಗಿ ಕಾರ್ಯ ನಿರ್ವಹಿಸಿದ ಭಾಗ

ಸತ್ಯವೇದ ಕಾಲಗಣನೆಯ 5ನೇ ಹಂತದ ಲೆಕ್ಕಾಚಾರಕ್ಕೆ ಬೇಕಾದ ಕಾಲಾವಧಿಯು ಇದುವೇ. ಆದರೆ ಈಗ ತಾನೆ ನಾವು ನೋಡಿದ ಹಾಗೆ, ನ್ಯಾಯಸ್ಥಾಪಕರ ಕಾಲಾವಧಿಯು ನಿಖರವಾಗಿಲ್ಲ, ಆರಂಭ ಮತ್ತು ಕೊನೆಯಲ್ಲಿ ಅವಧಿಗಳು ಒಂದನೊಂದು ಅತಿಕ್ರಮಿಸಿರುವದರಿಂದ (**Overlaps**) ಈ ಕಾಲಾವಧಿಯು ಇನ್ನೂ ಹೆಚ್ಚಾಗಿದೆ.

ದೇವರು "**ಸುಮಾರು**" ಎಂಬ ಪದವನ್ನು ಸರಿಯಾಗಿ ಮತ್ತು ಯೋಗ್ಯವಾಗಿ ಉಪಯೋಗಿಸಿದ್ದಾರೆ! ದೇವರು ಒಂದಕ್ಕೊಂದು ಕೂಡಿರುವ ಕಾಲಾವಧಿಯನ್ನು ತೆಗೆದುಹಾಕಿ ನಮಗೆ ಬೇಕಾದ ನಿಖರ(ನಿಶ್ಚಯ)ವಾದ ಕಾಲಾವಧಿಯನ್ನು ಕೊಟ್ಟಿದ್ದಾರೆ



**ಕಾಲಗಣನೆಗೆ ಅವಶ್ಯಕತೆ ಇರುವ ನ್ಯಾಯಾಧಿಪತಿಗಳ ಕಾಲಾವಧಿ 450 ವರ್ಷಗಳು.**

## ಹಂತ – 6

## (ರಾಜರುಗಳ ಕಾಲಾವಧಿಯು)



ಈ ರಾಜರುಗಳ ಕಾಲಾವಧಿಯು ಮೊದಲ ರಾಜನಾದ ಸೌಲನಿಂದ ಆರಂಭಿಸಿ, ಕೊನೆಯ ಯೆಹೂದದ ರಾಜನಾದ ಚಿದ್ಕೀಯನ ಬೀಳುವಿಕೆಯವರೆಗೂ ಇರುತ್ತದೆ.

ಈಗ ನಾವು ರಾಜರುಗಳ ಮತ್ತು ಅವರ ಆಳ್ವಿಕೆಯ ಕಾಲಾವಧಿಯ ಕ್ರಮವನ್ನು ನೋಡೋಣ.

| ವಾಕ್ಯ | ರಾಜರುಗಳ ಹೆಸರು | ಆಳ್ವಿಕೆಯ ಕಾಲಾವಧಿ |
|---|---|---|
| ಅಪೊಸ್ತಲ 13:21 | ಸೌಲನು | 40 ವರ್ಷ |
| 1 ಪೂರ್ವಕಾಲವೃತ್ತಾಂತ 29:27 | ದಾವೀದನು | 40 ವರ್ಷ |
| 1 ಪೂರ್ವಕಾಲವೃತ್ತಾಂತ 9:30 | ಸೊಲೊಮೋನನು | 40 ವರ್ಷ |

ಹೌದು! ಸೊಲೊಮೋನನ ಮರಣದ ನಂತರ, ಇಸ್ರಾಯೇಲ್ ರಾಜ್ಯವು ಎರಡು ಭಾಗವಾಯಿತು –

**ಇಸ್ರಾಯೇಲ್ (10 ಕುಲಗಳು)** **ಮತ್ತು....** **ಯೂದ (2 ಕುಲಗಳು)**

ಇನ್ನುಳಿದ ಕಾಲಗಣನೆಗೆ ದೇವರ ಕೃಪೆ (ದಯೆ)ಯನ್ನು ಹೊಂದಿದ ಯೂದ ಕುಲದ ಸಂತತಿಯನ್ನು ಅನುಸರಿಸುತ್ತೇವೆ, ಏಕೆಂದರೆ ಯೂದ ಕುಲದ ಮೂಲಕವಾಗಿ ಮೆಸ್ಸೀಯನು ಬರುತ್ತಾರೆ –ಶಿಲೋಹ (Shiloh) **(ಆದಿಕಾಂಡ 49:10)**

ಕೆಳಗೆ ಕೊಟ್ಟಿರುವಂತೆ, ಸೊಲೊಮೋನನ ಮಗನಾದ ರೆಹಬ್ಬಾಮ ಮತ್ತು ಅವನ ಆಳ್ವಿಕೆಯಿಂದ ಆರಂಭಿಸಿ ಯೂದ ರಾಜರುಗಳ ಪಟ್ಟಿ ನೋಡಬಹುದು.

| ಸತ್ಯವೇದದ ವಾಕ್ಯ | ಹೆಸರು | ಆಳ್ವಿಕೆಯ ಕಾಲಾವಧಿ |
|---|---|---|
| 2 ಪೂರ್ವಕಾಲವೃತ್ತಾಂತ 12:13 | ರೆಹಬ್ಬಾಮನು | 17 ವರ್ಷಗಳು |
| 2 ಪೂರ್ವಕಾಲವೃತ್ತಾಂತ 13:2 | ಅಬೀಯನು | 3 ವರ್ಷಗಳು |
| 2 ಪೂರ್ವಕಾಲವೃತ್ತಾಂತ 16:13 | ಆಸನು | 41 ವರ್ಷಗಳು |

| | | |
|---|---|---|
| 1 ಅರಸುಗಳು 22:42 | ಯೆಹೋಷಾಫಾಟನು | 25 ವರ್ಷಗಳು |
| 2 ಅರಸುಗಳು 8:17 | ಯೆಹೋರಾಮ್ | 8 ವರ್ಷಗಳು |
| 2 ಅರಸುಗಳು 8:26 | ಅಹಜ್ಯನು | 1 ವರ್ಷಗಳು |
| 2 ಅರಸುಗಳು 11:3 | ಅತಲ್ಯ | 6 ವರ್ಷಗಳು |
| 2 ಅರಸುಗಳು 12:1 | ಯೆಹೋವಾಷನು | 40 ವರ್ಷಗಳು |
| 2 ಅರಸುಗಳು 14:2 | ಅಮಚ್ಯನು | 29 ವರ್ಷಗಳು |
| 2 ಅರಸುಗಳು 15:2 | ಅಜರ್ಯ | 52 ವರ್ಷಗಳು |
| 2 ಅರಸುಗಳು 15:33 | ಯೋತಾಮನು | 16 ವರ್ಷಗಳು |
| 2 ಅರಸುಗಳು 16:2 | ಆಹಾಜನು | 16 ವರ್ಷಗಳು |
| 2 ಅರಸುಗಳು 18:2 | ಹಿಜ್ಕೀಯನು | 29 ವರ್ಷಗಳು |
| 2 ಅರಸುಗಳು 21:1 | ಮನಸ್ಸೆಯು | 55 ವರ್ಷಗಳು |
| 2 ಅರಸುಗಳು 21:19 | ಆಮೋನನು | 2 ವರ್ಷಗಳು |
| 2 ಅರಸುಗಳು 22:1 | ಯೋಷೀಯನು | 31 ವರ್ಷಗಳು |
| 2 ಅರಸುಗಳು 23:31 | ಯೆಹೋವಾಹಾಜನು | 1/4 Yr.(3 ತಿಂಗಳು) |
| 2 ಅರಸುಗಳು 23:36 | ಯೆಹೋಯಾಕೀಮನು | 11 ವರ್ಷಗಳು |
| 2 ಅರಸುಗಳು 24:8 | ಯೆಹೋಯಾಖೀನನು | 1/4 Yr.(3 ತಿಂಗಳು) |
| 2 ಅರಸುಗಳು 24:18 | ಚಿದ್ಕೀಯನು | 11 ವರ್ಷಗಳು |


**ಹೀಗೆ ಈ ರಾಜರುಗಳ ಕಾಲಾವಧಿ = 513 ವರ್ಷಗಳು**

ದ0ಯುವಿಟ್ಟು ಗಮನಿಸಿ: ಈ ಅಧಿಕವಾದ 6 ತಿಂಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

## ರಾಜರುಗಳ ಕಾಲಾವಧಿ0ಯು 513 ವರುಷಗಳು

## ಹಂತ – 7

### (ರಾಜರುಗಳ ಕಾಲಾವಧಿ0ಯ ಮುಕ್ತಾಯದಿಂದ ಕ್ರಿ.ಶ 1ರ ವರೆಗೆ)




ಈ ಕೊನೆ0ಯ ಕಾಲಾವಧಿ0ಯು 0ಯೂದ ಕುಲದ ಕೊನೆ0ಯ ರಾಜನಾದ ಚಿದ್ಕೀ0ಯನ ಬೀಳುವಿಕೆಯಿಂದ ಆರಂಭಿಸಿ ಕ್ರಿ.ಶ. 1ರ ತನಕ ನಮ್ಮನ್ನು ಕರೆದೊಯ್ಯುತ್ತದೆ.

ಈಗ ನಾವು ಸತ್ಯವೇದದ ಕಾಲಗಣನೆಯ ಕೊನೆಯ ಹಂತವನ್ನು ನೋಡೋಣ. ಕೊನೆ0ಯ 0ಯೂದ ರಾಜನಾದ ಚಿದ್ಕೀ0ಯನ ಬೀಳುವಿಕೆ0ಯ ನಂತರ ಏನಾಯಿತ್ತೆಂದು ನೋಡೋಣ.

**2 ಪೂರ್ವಕಾಲವೃತ್ತಾಂತ 36:20,21**

**"ಕತ್ತಿಗೆ ತಪ್ಪಿಸಿಕೊಂಡವರನ್ನು ಅರಸನು ಬಾಬೆಲಿಗೆ ಸೆರೆಯೊಯ್ದನು ಪಾರಸಿಯ ಪ್ರಭುತ್ವವು**

ಅಲ್ಲಿ ಸ್ಥಾಪಿತವಾಗುವವರೆಗೆ ಅವರು ಅವನಿಗೂ ಅವನ ಮಕ್ಕಳಿಗೂ ಸೇವಕರಾಗಿದ್ದರು. ಈ ಪ್ರಕಾರ ಯೆಹೋವನು ಯೆರೆಮೀಯನ ಮುಖಾಂತರ ಹೇಳಿಸಿದ ಮಾತು ನೆರವೇರಿ ದೇಶವು ತನ್ನ ಸಬ್ಬತ್ ಕಾಲವನ್ನು ಅನುಭವಿಸುವುದಕ್ಕೆ ಮಾರ್ಗವಾಯಿತು. ದೇಶವು 70 ವರುಷ ಹಾಳುಬಿದ್ದು ಆ ಕಾಲದಲ್ಲೆಲ್ಲಾ ವಿಶ್ರಾಂತಿಯನ್ನು ಅನುಭವಿಸುತ್ತಿತ್ತು."

**ಹೌದು! (ಬೆಬಿಲೋನ್) ಬಾಬೆಲಿನಲ್ಲಿ ಇಸ್ರಾಯೇಲ್ಯರ ಸೆರೆಯ ಕಾಲಾವಧಿಯು 70 ವರುಷಗಳು.**

ನಂತರ ಮೊದಲನೆ ವರ್ಷದ ಪಾರಸಿಯ ರಾಜನಾದ ಕೋರೆಷನ (Cyrus) ಆಳ್ವಿಕೆಯಲ್ಲಿ ಜನರು ಬಿಡುಗಡೆ ಹೊಂದಿದರು!

## 2 ಪೂರ್ವಕಾಲ 36:22,23

" ಪಾರಸಿಯ ಅರಸನಾದ ಕೋರೆಷನ ಮೊದಲನೆಯ ವರುಷದಲ್ಲಿ ಯೆಹೋವನು ತಾನು ಯೆರೆಮೀಯನ ಮುಖಾಂತರ ಹೇಳಿಸಿದ ವಾಕ್ಯವನ್ನು ನೆರವೇರಿಸುವುದಕ್ಕಾಗಿ ಆ ಪಾರಸಿಯ ರಾಜನಾದ ಕೋರೆಷನ ಮನಸ್ಸನ್ನು ಪ್ರೇರಿಸಿದ್ದರಿಂದ ಅವನು ತನ್ನ ರಾಜ್ಯದಲ್ಲೆಲ್ಲಾ ಡಂಗುರದಿಂದಲೂ ಪತ್ರಗಳಿಂದಲೂ ಪಾರಸಿಯ ರಾಜನಾದ ಕೋರೆಷನೆಂಬ ತನ್ನ ಮಾತನ್ನು ಕೇಳಿರಿ ಪರಲೋಕದೇವರಾದ ಯೆಹೋವನು ನನಗೆ ಭೂಲೋಕದ ಎಲ್ಲಾ ರಾಜ್ಯಗಳನ್ನು ಒಪ್ಪಿಸಿ ತನಗೋಸ್ಕರ ಯೆಹೂದ ದೇಶದ ಯೆರೂಸಲೇಮಿನಲ್ಲಿ ಆಲಯವನ್ನು ಕಟ್ಟಬೇಕೆಂದು ಆಜ್ಞಾಪಿಸಿದ್ದಾನೆ. ನಿಮ್ಮಲ್ಲಿ ಯಾರು ಆತನ ಪ್ರಜೆಗಳಾಗಿರುತ್ತಾರೋ ಅವರು ಸ್ವದೇಶಕ್ಕೆ ಹೋಗಲಿ ಅವರ ದೇವರಾದ ಯೆಹೋವನು ಅವರ ಸಂಗಡ ಇರುವನು ಎಂದು ಪ್ರಕಟಿಸಿದನು".

ಕೋರೆಷ ರಾಜನ ಮೊದಲ ವರ್ಷದ ಈ ದಿನಾಂಕವನ್ನು 536 ಕ್ರಿ.ಪೂ ವೆಂದು. ಲೋಕದ ಇತಿಹಾಸದಲ್ಲಿ ದಾಖಲಾಗಿದೆ.



ಹೌದು! ದೇವರು ನಮ್ಮನ್ನು ಕೈಹಿಡಿದು ಆತನ ವಾಕ್ಯಗಳ ಮೂಲಕ, ಲೋಕದ ಇತಿಹಾಸದ ವಿಶ್ವಾಸಾರ್ಹ ಕಾಲಗಣನೆಯ ಖಚಿತ ಮತ್ತು ತಿಳಿದಿರುವ ಪ್ರದೇಶವನ್ನು ನಾವು ತಲುಪುವವರೆಗೆ ನಡೆಸುತ್ತಾರೆ.

ಇದು ಹೇಗಿದೆ0ಯೆಂದರೆ ಒಬ್ಬನು ಒಂದು ನಿರ್ಧಿಷ್ಟ ಜಾಗಕ್ಕೆ ದಾರಿ0ಯನ್ನು ಕೇಳಿದಾಗ, ಮತ್ತೊಬ್ಬನು ಆ ವ್ಯಕ್ತಿಯು ಪರಿಚಿತ ಪ್ರದೇಶವನ್ನು ತಲುಪುವವರೆಗೆ ಮತ್ತು ವ್ಯಕ್ತಿಯು ಆ ಸ್ಥಳವನ್ನು ಸ್ವತಃ ಕಂಡುಕೊಳ್ಳುವವರೆಗೂ ಹೇಗೆ ಮಾರ್ಗದರ್ಶನ ಮಾಡುತ್ತಾನೋ ಮತ್ತು ತೋರಿಸುತ್ತಾನೋ ಹಾಗೆ ಇದೆ!


**ಹೌದು! ಈ ದಿನ ದೇವರು ಕೂಡ ನಮಗೆ ಹಾಗೆ0ಯೇ ಮಾಡಿದ್ದಾರೆ!**



**ಆದ್ದರಿಂದ ಕೊನೆ0ಯ ಹಂತವಾದ ಈ ಕಾಲಾವಧಿ0ಯು ಕ್ರಿ.ಶ 1ರ ತನಕ ಅದು 70+536= 606 ವರುಷಗಳು**

**ಕೊನೆ0ಯುದಾಗಿ ಆದಾಮನ ಸೃಷ್ಟಿಯಿಂದ ಕ್ರಿ. ಶ. ಜನವರಿ 1ನೇ ತಾರೀಖಿನ ವರೆಗೆ ಒಟ್ಟು ವರುಷಗಳು ಹೀಗಿದೆ–**


**1656 + 427 + 430 + 46 + 450 + 513 + 606 = 4128 ವರುಷಗಳು**



**ಆದ್ದರಿಂದ ಆದಾಮನು ಸೃಷ್ಟಿ0ಯು ನಿಖರವಾದ ವರ್ಷವು 4128 ಕ್ರಿ.ಪೂ ಎಂದು ನಮಗೆ ಗೊತ್ತಿದೆ!**

**ಇಲ್ಲಿ ಇನ್ನೊಂದು ವಿಷ0ಯು ಗಮನಿಸಬೇಕಾದ್ದದೇನೆಂದರೆ, 31ನೇ ಡಿಸಂಬರ್ ಕ್ರಿ.ಪೂ 1ನೇ ವರ್ಷದ ನಂತರದ ದಿನವು 1ನೇ ಜನವರಿ ಕ್ರಿ.ಶ. 1 ಬರುತ್ತದೆ.**

**ಇಲ್ಲಿ0ಯಾವುದೇ "ಸೊನ್ನೆ" ವರುಷವು ಈ ಎರಡು ಕಾಲಾವಧಿ0ಯಾದ ಕ್ರಿ.ಪೂ ಮತ್ತು ಕ್ರಿ.ಶಕವನ್ನು ಬೇರ್ಪಡಿಸುವುದಿಲ್ಲ**




"**ದೇವರ ಪುಸ್ತಕ**"ವಾದ – ಸತ್ಯವೇದದಿಂದ, ಆದಾಮನ ಸೃಷ್ಟಿಯಿಂದ ಕ್ರಿ. ಶ 1 ರವರೆಗಿನ ಕಾಲಾವಧಿಯನ್ನು ನಾವು 50 ಕೊಂಡಿಗಳು ಮತ್ತು ವಚನಗಳ ಮುರಿಯದ ಸರಪಳಿಯ ಮೂಲಕ ಕಂಡುಕೊಂಡಿದ್ದೇವೆ.

ಹೌದು! **ಯೆಶಾಯ 34:16**ರಲ್ಲಿ ವಾಗ್ದಾನ ಮಾಡಿರುವ ಹಾಗೆ0ಯೇ ದೇವರು ತಾನೇ ತನ್ನ ವಾಕ್ಯದ ಮೂಲಕ ನಮಗೆ ನಿಖರವಾದ ಕಾಲಗಣನೆಯನ್ನು ತೋರಿಸಿದ್ದಾರೆ.

**ಯೆಶಾಯ 34:16**

**"ಯೆಹೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ, ಇವುಗಳಲ್ಲಿ ಯಾವುದೂ ಇಲ್ಲದಿರದು, ಎಲ್ಲವೂ ಜೊತೆ ಜೊತೆಯಾಗಿರುವವು; ಆತನ ಬಾಯಿಂದ ಅಪ್ಪಣೆಯಾಯಿತಲ್ಲವೆ, ಆತನ ಆತ್ಮವು ಇವುಗಳನ್ನು ಒಟ್ಟಿಗೆ ಬರಮಾಡಿತಷ್ಟೆ".**


**ಹೌದು! ಈ ದಿನ ಮನುಷ್ಯನಿಗಾಗಿ ದೇವರ ಮಹಾ "ಸಮಯದ ಗಡಿಯಾರ"ವನ್ನು ವಾಕ್ಯವು ಪ್ರಕಟಿಸಿದೆ**

**ಇದನ್ನು ನಾವು ನಂಬುತ್ತೇವೆ ಏಕೆಂದರೆ –"........ನಿನ್ನ ವಾಕ್ಯವೇ ಸತ್ಯವು"**


**(ಯೋಹಾನ 17:17)**



"ಆಮೆನ್"


ಆದಾಮನ ಸೃಷ್ಟಿಯಿಂದ ಕ್ರಿ.ಶ 1
ರವರೆಗೆ 4128 ವರ್ಷಗಳು
ಆದಾಮನ ಸೃಷ್ಟಿ
ಜಲಪ್ರಳಯ
ಐಗುಪ್ತವನ್ನು ಬಿಡುವುದು
ನ್ಯಾಯಾಧಿಪತಿಗಳ ಕಾಲಾವಧಿ
ಬಾಬೆಲಿನಲ್ಲಿ ಸೆರೆ
1656
427
430
40+6
450
513
70
536
ಕ್ರಿ. ಪೂ. 4128
ಕ್ರಿ. ಶ.1
40 ವರ್ಷ ಅರಣ್ಯದಲ್ಲಿ ಅಲೆದಾಟ ಮತ್ತು ದೇಶದ ಹಂಚಿಕೆ
ಅರಸುಗಳ ಕಾಲಾವಧಿ
ಅಬ್ರಹಾಮನ ಒಡಂಬಡಿಕೆ
ಕೋರೆಷನ ಮೊದಲನೆ ವರ್ಷ

For Private Circulation Only




NOT FOR SALE

For more Subjects contact: MESSENGERS OF CHRIST E-mail: thekingdom1_6@yahoo.com